**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ**
**ಉಪಸ್ಥಿತಿ ಜಮಖಂಡಿ ಇವರ ನ್ಯಾಯಾಲಯದಲ್ಲಿ**

**SC No.5017/2021**

1) ಕರ್ನಾಟಕ ಸರಕಾರ
(ಇದರ ಪ್ರತಿನಿಧಿಯಾಗಿ PSI ಜಮಖಂಡಿ ಗ್ರಾ ಪೋಲೀಸ ಠಾಣೆ)

.....ಫಿರ್ಯಾದಿದಾರ.

ವಿರುದ್ಧ

1) ಕಲ್ಲಪ್ಪ ಪರಪ್ಪ ಕಡಪಟ್ಟಿ

...... ಆರೋಪಿತ

**: ದೋಷಾರೋಪಣೆ :**

ನಾನು ಶ್ರೀ ಅರ್ಜುನ ಎಸ್ ಮಳ್ಳೂರ, 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ಉಪಸ್ಥಿತಿ ಜಮಖಂಡಿ ಆರೋಪಿತರಾದ,

1) ಕಲ್ಲಪ್ಪ ಪರಪ್ಪ ಕಡಪಟ್ಟಿ
ವಯಸ್ಸುಃ 42 ವರ್ಷ, ಉದ್ಯೋಗಃ ಕೃಷಿ ,
ಸಾಃ ಆಲಗೂರ, ತಾಃ ಜಮಖಂಡಿ

------

ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆಃ

ಆರೋಪಿಯಾದ ನೀನು ದಿಃ 25-07-2020 ರಂದು ಸಂಜೆ 4-30 ರ ಸುಮಾರಿನಲ್ಲಿ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕ ಆಲಗೂರ ಗ್ರಾಮದಲ್ಲಿ ಬರುವ ನಿನ್ನ ಜಮೀನಿನಲ್ಲಿ ನಿಮ್ಮ ತಂದೆ ಪರಪ್ಪ ಶಿವಪ್ಪ ಕಡಪಟ್ಟಿ ಈತನಿಗೆ ಕೊಲೆ ಮಾಡುವ ಉದ್ದೇಶದಿಂದ ಆತನ ಮೇಲೆ ನಿನ್ನ ಕೈಯಲ್ಲಿದ್ದ ಕುಡಗೋಲಿನಿಂದ ಬೆನ್ನಿಗೆ ಹೊಡೆದು ಮಾರಾಣಾಂತಿಕ ಗಾಯ ಉಂಟುಪಡಿಸಿದ್ದು ಪರಪ್ಪ ಕಡಪಟ್ಟಿ ಈತನನ್ನು ಜಮಖಂಡಿ ಕೆ ಎಲ್ ಇ ಅಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಿ ನಂತರ ಬಿಡುಗಡೆ ಹೊಂದಿದ್ದು ಮನೆಯಲ್ಲಿದ್ದಾಗ ಸದರಿ ಹಲ್ಲೆಯಿಂದಾದ ಗಾಯಗಳಿಂದಾಗಿ ಪರಪ್ಪ ಕಡಪಟ್ಟಿ ದಿಃ 24-08-2020 ಬೆಳಿಗ್ಗೆ 5-30 ರ ಸುಮಾರಿಗೆ ಮೃತಪಟ್ಟಿದ್ದು ಭಾರತೀಯ ದಂಡ ಸಂಹಿತೆ ಕಲಂ.302 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆದ್ದರಿಂದ ಆರೋಪಿತನಾದ ನೀನು ಈ ನ್ಯಾಯಾಲಯದಿಂದ ಈ ಮೇಲಿನ ಆರೋಪಣೆಗಳಿಗೆ ವಿಚಾರಣೆಗೆ ಒಳಪಟ್ಟಿರುತ್ತೀರಿ.

ಜಮಖಂಡಿ.
ದಿಃ 11-08-2022

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ (ಉಪಸ್ಥಿತಿ ಜಮಖಂಡಿ)

**<u>*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ರವರ ನ್ಯಾಯಾಲಯ, ಬಾಗಲಕೋಟ (ಉಪಸ್ಥಿತಿ ಜಮಖಂಡಿ)</u>**

**<u>ಸತ್ರ ಪ್ರಕರಣ ಸಂ. *5017/2021*</u>**

| | | |
|---|---|---|
| ಪಿರ್ಯಾದುದಾರ | : | ಕರ್ನಾಟಕ ಸರಕಾರ, ಇದರ ಪ್ರತಿನಿಧಿಯಾಗಿ ಪಿ.ಎಸ್.ಐ. ಜಮಖಂಡಿ ಗ್ರಾ ಪೋಲೀಸ ಠಾಣೆ |

**- ವಿರುದ್ಧ -**

| | | |
|---|---|---|
| ಆರೋಪಿಯ ಹೆಸರು | : | ಕಲ್ಲಪ್ಪ |
| ತಂದೆಯ ಹೆಸರು | ಃ | ಪರಪ್ಪ ಕಡಪಟ್ಟಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಕೃಷಿ |
| ವಿಳಾಸ | : | ಆಲಗೂರ , ತಾಃ ಜಮಖಂಡಿ |

=====

**<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ.228(2) ರಡಿ ಆರೋಪಿಯ ದೋಷಾರೋಪಣೆ</u>**

ಪ್ರ.ಸಂ.1 : ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತಾ ?

ಉತ್ತರ :

ಪ್ರ.ಸಂ.2 : ತಪ್ಪು ಒಪ್ಪಿಕೊಳ್ಳುತ್ತೀಯಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರ :

(ಈ ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ನಾನೇ ಓದಿ ಹೇಳಿ, ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಅಂತಾ ಈ ಮೂಲಕ ದೃಢೀಕರಿಸುತ್ತೇನೆ)

ಸ್ಥಳ : ಜಮಖಂಡಿ.
ದಿನಾಂಕ:11-08-2022

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ (ಉಪಸ್ಥಿತಿ ಜಮಖಂಡಿ)